**ಸಾಕ್ಷಿಯನ್ನು ದಿಃ 29.03.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ ಎಲ್ ವಿ ವಿ ವಕೀಲರಿಂದ.**

ನಾನು ಈ ದಾವೆಯನ್ನು ಹಾಕಿದಾಗ 1 ನೇ ಪ್ರತಿವಾದಿ ನನ್ನ ತಂದೆ ಹೊನ್ನಯ್ಯ ಜೀವಂತ ಇದ್ದರು ಎಂದರೆ ಸರಿ. ಅವರು ತಮ್ಮ ಜೀವಿತ ಅವಧಿಯಲ್ಲಿ ದಾವಾ ಆಸ್ತಿಗಳಲ್ಲಿ ನನಗೂ ವಿಭಾಗ ಬೇಕು ಎಂದು ಯಾವುದೇ ದಾವೆಯನ್ನು ಹೂಡಿರಲಿಲ್ಲ. ನನ್ನ ತಾತ ಕೆಂಪಯ್ಯನಿಗೆ ಕೆಂಪಹೊನ್ನಯ್ಯ 2 ನೇ ಮಗ ಇದ್ದರು ಎಂದರೆ ಸರಿ. ಕೆಂಪಹೊನ್ನಯ್ಯನವರ ಹೆಂಡತಿಯ ಹೆಸರು ಲಕ್ಷ್ಮಮ್ಮ. ಕೆಂಪಹೊನ್ನಯ್ಯ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಅವರು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ಕೆಂಪಹೊನ್ನಯ್ಯ ಮತ್ತು ಲಕ್ಷ್ಮಮ್ಮ ನವರಿಗೆ ಎಷ್ಟು ಜನ ಮಕ್ಕಳು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಮ್ಮ ಜೀವಂತ ಇದ್ದಾರೆ ಎಂದರೆ ಇರಬಹುದು. ಕೆಂಪಹೊನ್ನಯ್ಯನವರ ಕುಟುಂಬದವರನ್ನು ನಮ್ಮ ವಂಶವೃಕ್ಷದಲ್ಲಿ ತೋರಿಸಿಲ್ಲ ಎಂದರೆ ಸಾಕ್ಷಿಯು ಅವರು ಮರಣ ಹೊಂದಿರುವುದರಿಂದ ತೋರಿಸಿಲ್ಲ ಎಂದು ನುಡಿಯುತ್ತಾರೆ. ಕೆಂಪಹೊನ್ನಯ್ಯನವರನ್ನು ಪವತಿ ಎಂದು ತೋರಿಸಿ ಅವರ ಹೆಂಡತಿ ಲಕ್ಷ್ಮಮ್ಮನವನ್ನು ತೋರಿಸಬಹುದಿತ್ತು ಎಂದರೆ ಸಾಕ್ಷಿಯು ಅವರು ಜೀವಂತ ಇದ್ದಾರೋ ಇಲ್ಲವೋ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದ ಅಸ್ತಿಗಳಲ್ಲಿ ಕೆಂಪಹೊನ್ನಯ್ಯನ ಕುಟುಂಬಸ್ಥ.ರಿಗೂ ಭಾಗ ಇದೆ ಎಂದರೆ ಸರಿ. ನಾವು ಲಕ್ಷ್ಮಮ್ಮ ಕಾಣೆಯಾಗಿರುವ ಬಗ್ಗೆ ಯಾವುದೇ ದೂರು ದಾಖಲು ಮಾಡಿಲ್ಲ. ಕೆಂಪಹೊನ್ನಯ್ಯನವರ ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿಲ್ಲ. ನನ್ನ ಬಳಿ ಇಲ್ಲ. ಲಕ್ಷ್ಮಮ್ಮ ಈ ದಾವೆಗೆ ಅವಶ್ಯಕ ಪಕ್ಷಗಾರರು ಎಂದರೆ ಸಾಕ್ಷಿಯು ಅವರು ಎಲ್ಲಿ ಇರುತ್ತಾರೆ ಎಂಬುದು ನನಗೆ ಗೊತ್ತಿರದ ಕಾರಣ ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಕೆಂಪಹೊನ್ನಯ್ಯ ಮತ್ತು ಅವರ ಹೆಂಡತಿ ಲಕ್ಷ್ಮಮ್ಮ ನವರ ಬಗ್ಗೆ ಬರೆಸಿಲ್ಲ.

ನಿಪಿ-2 ರಲ್ಲಿ ಇರುವ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಸ್ವಾಧೀನಪಡಿಸಿಕೊಂಡಿರುವ 7 ಗುಂಟೆ ನಮ್ಮ ಅಜ್ಜಿ ರಂಗಮ್ಮನವರ ಹೆಸರಿನಲ್ಲಿ ಇತ್ತು. ಪ್ರಾಧಿಕಾರದವರು 7 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವ ಅಸ್ತಿಗೆ ನೀಡಿರುವ ಪರಿಹಾರ ಮೊತ್ತವನ್ನು ಯಾರೂ ಪಡೆದಿಲ್ಲ ಅಲ್ಲೇ ಇರುತ್ತದೆ. ಎಷ್ಟು ಪರಿಹಾರ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ಹಣದ ಬಗ್ಗೆ ಈ ದಾವೆಯಲ್ಲಿ ನಾನು ಯಾವುದೇ ಪರಿಹಾರ

ಕೊರಿಲ್ಲ ಮತ್ತು ಸೇರಿಸಿಲ್ಲ. ದಾವಾ 1 ನೇ ಆಸ್ತಿಯಲ್ಲಿ ಇರುವ 1 ಗುಂಟೆ ಕರಾಬು ಜಮೀನು ನಮಗೆ ಸೇರಿದ್ದಲ್ಲ ಎಂದರೆ ಸಾಕ್ಷಿಯು ನಾವು ಸ್ವಾಧೀನದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ದಾವಾದ 3 ನೇ ಆಸ್ತಿಯು ನನ್ನ ಅಜ್ಜಿ ರಂಗಮ್ಮನ ಹೆಸರಿನಲ್ಲಿ ಇದೆ. ದಾವಾದ 3 ನೇ ಆಸ್ತಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ನಿಪಿ-4 ದಾಖಲೆಯಲ್ಲಿ ಇರುವ ಮುಕ್ಕಾಲು ಗುಂಟೆಗೆ ನಮ್ಮ ಕುಟುಂಬದವರ ಯಾರ ಹೆಸರಿನಲ್ಲೂ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾವೇ ಉಳುಮೆ ಮಾಡುತ್ತೇವೆ ಎಂದು ನುಡಿಯುತ್ತಾರೆ. ಸದರಿ ನಿಪಿ-4 ದಾಖೆಯಲ್ಲಿ ಇರುವ ರಾಷ್ಟೀಯ ಹೆದ್ದಾರಿ ಪ್ರಾಧಿಕಾರದವರು ವಶಪಡಿಸಿಕೊಂಡಿರುವ 3-1/4 ಗುಂಟೆ ಜಮೀನು ನಮ್ಮ ಅಜ್ಜಿ ರಂಗಮ್ಮನ ಹೆಸರಿನಲ್ಲಿ ಇತ್ತು. ಈ ದಾವೆಯನ್ನು ಹಾಕುವ ಮೊದಲೇ ಹೆದ್ದಾರಿ ಪ್ರಾಧಿಕಾರದವರು ಸದರಿ ಜಮೀನನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಹೆದ್ದಾರಿ ಪ್ರಾಧಿಕಾರದವರು ಖಾತೆದಾರರಿಗೆ ಅವಾರ್ಡ್ ನೊಟೀಸನ್ನು ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ನನಗೆ ಯಾವುದೇ ನೋಟೀಸು ಸಿಕ್ಕಿಲ್ಲ ಎಂದು ನುಡಿಯುತ್ತಾರೆ. ದಾವಾದ 3 ನೇ ಸ್ವತ್ತು ನಮ್ಮ ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ.

ದಾವಾದ 4 ನೇ ಆಸ್ತಿಯು ನಮ್ಮ ಅಜ್ಜಿ ರಂಗಮ್ಮನವರ ಹೆಸರಿನಲ್ಲಿ ಇದೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ನಿಪಿ-5 ದಾಖಲೆಗಳಲ್ಲಿ ನನ್ನ ಅಜ್ಜಿಯ ಹೆಸರಿಗೆ 2 ಎಕರೆ 18 ಗುಂಟೆ ಮಾತ್ರ ಇದೆ ಎಂದರೆ ಸರಿ. ನಾವು 3 ಗುಂಟೆ ಹೆಚ್ಚಿಗೆ ಸೇರಿಸಿದ್ದೇವೆ ಎಂದರೆ ಸಾಕ್ಷಿಯು ಆ 3 ಗುಂಟೆ ಜಮೀನನ್ನು ಹಿಂದುಳಿದ ವರ್ಗದವರಿಗೆ ಮನೆ ಕಟ್ಟಿ ಕೊಳ್ಳಲು ನಮ್ಮ ತಾತ ನೀಡಿರುತ್ತಾರೆ. ಅದರಲ್ಲಿ 2 ಮನೆ ಇರುತ್ತವೆ. 2 ಎಕರೆ 21 ಗುಂಟೆ ಎಂದರೆ ಹಿಂದುಳಿದ ವರ್ಗದವರು ಮನೆ ಕಟ್ಟಿಕೊಂಡು ವಾಸ ಇರುವ ಜಾಗವೂ ಒಳಪಡುತ್ತದೆ ಎಂದರೆ ಸರಿ. ಸದರಿ ಮನೆಯ ಮಾಲೀಕರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಆ ಮನೆ ಮಾಲೀಕರ ಹೆಸರಿಗೆ ಖಾತೆ ಆಗಿದೆ ಎಂದು ನುಡಿಯುತ್ತಾರೆ ಹಾಗಾಗಿ ಸೇರಿಸಿಲ್ಲ. ನಾವು ದಾವಾದ 4 ನೇ ಆಸ್ತಿಯಲ್ಲಿ ನಮ್ಮ ಕುಟುಂಬಕ್ಕೆ ಇರುವ ಅಸ್ತಿಗಿಂತ ಹೆಚ್ಚಿಗೆ ಈ ದಾವೆಯಲ್ಲಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ದಾವಾದ 8 ನೇ ಆಸ್ತಿಯು ನನ್ನ ತಾತ ಕೆಂಪಯ್ಯನವರ ಹೆಸರಿನಲ್ಲಿ ಇದೆ. ಸದರಿ ಅಸ್ತಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ನಿಪಿ-9 ದಾಖಲೆಯಲ್ಲಿ ನಮ್ಮ ಕುಟುಂಬದವರ ಯಾರ ಹೆಸರಿನಲ್ಲಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಕ್ರಯ ಪತ್ರದಲ್ಲಿ ಏನು ಇದೆಯೋ ಅದನ್ನು ಪರಿಗಣಿಸಿ ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-19 ರ ಕ್ರಯ ಪತ್ರದ

ಅಧಾರದ ಮೇಲೆ ಏಕೆ ಖಾತೆ , ಪಹಣಿ ಮಾಡಿಸಿಕೊಂಡಿಲ್ಲ ಎಂದರೆ ನಮ್ಮ ತಂದೆ ನಮ್ಮ ಚಿಕ್ಕಪ್ಪ ನಮಗೆ ಗೊತ್ತಾಗಲಿಲ್ಲ ಎಂದು ನುಡಿಯುತ್ತಾರೆ. ನಿಪಿ-19 ರ ಅಡಿಯಲ್ಲಿ ನಾವು ಖರೀದಿ ಮಾಡಿದ ಅಸ್ತಿಗಳು ನಮ್ಮ ಕುಟುಬಂದಲ್ಲಿ ಉಳಿದಿವೆ ಎಂದು ತೋರಿಸಲು ಋಣಭಾರ ಪತ್ರವನ್ನು ಹಾಜರು ಮಾಡಿಲ್ಲ. ನಿಪಿ-19 ರ ಪ್ರಕಾರ ಸರ್ವೆ ನಂಬರ್ 152/1 ಎ ರಲ್ಲಿ 20 ಗುಂಟೆ ಮಾತ್ರ ನಮಗೆ ಖರೀದಿ ಆಗಿರುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಉಳಿದ ಅಸ್ತಿಯನ್ನು ನಂಜಯ್ಯನವರಿಂದ ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

**(ಮುಂದುವರಿದ ಪಾಟೀಸವಾಲಿಗೆ ವಕೀಲರು ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.